ಸಿ.ಸಿ.ನಂ.876/2023

ಪಿ.ಡಬ್ಲೂಃ 1- ಎಸ್. ರಾಜೇಶ್ ಬಿನ್ ಎ. ಸೋಹನ್ ಲಾಲ್

ದಿನಾಂಕಃ 23/10/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ಕೆ.ವಿ.ವಿ. ವಕೀಲರಿಂದ**

1. ನನಗೆ ಈಗ ಸುಮಾರು 5-6 ವರ್ಷಗಳಿಂದ ಆರೋಪಿಯ ಪರಿಚಯವಿರುತ್ತದೆ. ಪ್ರಸ್ತುತ ವ್ಯವಹಾರವನ್ನು ಹೊರತು ಪಡಿಸಿ ನನ್ನ ಮತ್ತು ಆರೋಪಿಯ ಮಧ್ಯ ಬೇರೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ಆರೋಪಿಯು ಕ್ಯೆಟ್ ಟೆಕ್ನೊಲಾಜಿಸ್ ಪ್ರೆವೇಟ್ ಲಿಮಿಟೆಡ್ ಎಂಬ ಕೈಗಾರಿಕೆಯನ್ನು ನಡೆಸುತ್ತಾರೆ ಎಂದರೆ ಸರಿ. ನಿಪಿ-1 ಚೆಕ್ ಆರೋಪಿಯ ಕೈಗಾರಿಕೆಯ ಹೆಸರಿನಲ್ಲಿ ಇರುವ ಖಾತೆಗೆ ಸಂಬಂಧಪಟ್ಟ ಚೆಕ್ ಆಗಿರುತ್ತದೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಆರೋಪಿಯ ಕೈಗಾರಿಕೆಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

2. ನಾನು ಹಣಕಾಸಿನ ವ್ಯಾಪಾರ ಮಾಡುವುದಿಲ್ಲ. ನಾನು ಮ್ಯಾಕ್ಸ ಇಂಜಿನಿಯರ್ಸ್ ಎಂಬ ಉದ್ದಿಮೆಯನ್ನು ಹೊಂದಿದ್ದು ನನ್ನ ಉದ್ದಿಮೆಯಲ್ಲಿ ತಯಾರಾಗುವ ಸಾಮಾನುಗಳನ್ನು ಆರೋಪಿಯು ಖರೀದಿಸುತ್ತಿದ್ದರಿಂದ ಆ ಮೂಲಕ ನನಗೂ ಮತ್ತು ಅವರಿಗೂ ಪರಿಚಯವಾಗಿರುತ್ತದೆ. ಈ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ. ಅದೇ ರೀತಿ ಸದರಿ ವಿಚಾರವನ್ನು ನಾನು ನನ್ನ ದೂರಿನಲ್ಲಾಗಲೀ ಅಥವಾ ನೋಟಿಸಿನಲ್ಲಾಗಲೀ ಹೇಳಿರುವುದಿಲ್ಲ.

3. ನಾನು ಆರೋಪಿಗೆ ದಿನಾಂಕ 07.03.2023 ರಂದು ನನ್ನ ಮನೆಯಲ್ಲಿ ಹಣ ಕೊಟ್ಟಿರುತ್ತೇನೆ. ಆಗ ನಮ್ಮ ಮನೆಯಲ್ಲಿ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ನಾನು ಸಂಪೂರ್ಣ ರೂ.8,75,000/-ಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಸದರಿ ಮೊತ್ತವು ರೂ.500 ಮುಖ ಬೆಲೆಯ ನೋಟುಗಳಲ್ಲಿ ಇತ್ತು. ಸದರಿ ಹಣವನ್ನು ನಾನು ಬ್ಯಾಂಕಿನಿಂದ ಡ್ರಾ ಮಾಡಿ ತಂದಿರಲಿಲ್ಲ ಹೊರತು ನಮ್ಮ ಮನೆಯಲ್ಲಿಯೇ ಇಟ್ಟುಕೊಂಡಿದ್ದೆ. ಸದರಿ ಹಣವು ನನ್ನ ಉಳಿತಾಯದ ಹಣ ಆಗಿತ್ತು.

4. ನಾನು ಆದಾಯ ತೆರಿಗೆ ಪಾವತಿಸುತ್ತೇನೆ. ಮಾರ್ಚ 2023 ರಲ್ಲಿ ನನ್ನ ಹತ್ತಿರ ರೂ.8,75,000/-ಗಳು ಇತ್ತು ಎಂದು ನಾನು ನನ್ನ ಆದಾಯ ತೆರಿಗೆ ರಿರ್ಟನ್ಸ್ ನಲ್ಲಿ ತೋರಿಸಿರುವುದಿಲ್ಲ. ಆರೋಪಿಯು ತಮ್ಮ ವ್ಯಾಪಾರಕ್ಕಾಗಿ ಹಣದ ಅವಶ್ಯಕತೆ ಇರುತ್ತದೆ ಎಂದು ಕೇಳಿ ನನ್ನ ಹತ್ತಿರ ಹಣ ಪಡೆದುಕೊಂಡಿದ್ದರು. ನಾನು ಆರೋಪಿಯಿಂದ ನಿಪಿ-1 ಚೆಕ್ಕನ್ನು ಪಡೆಯುವಾಗ ಅವರ ಉದ್ದಿಮೆಗೆ ಸಂಬಂಧಪಟ್ಟ ಚೆಕ್ ಬೇಡ ಮತ್ತು ವ್ಯಯಕ್ತಿಕ ಖಾತೆಯ ಚೆಕ್ ಕೊಡಿ ಎಂದು ನಾನು ಆರೋಪಿಗೆ ಹೇಳಿರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್